# ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಯೋಜನಾ (ಪಿಎಮ್‌ಜೆಜೆಬಿವೈ)ದ ಅಡಿಯಲ್ಲಿ ಕ್ಲೇಮು ಇತ್ಯರ್ಥದ ಕಾರ್ಯವಿಧಿ

ರೂ. 2,00,000/- ದ ಕ್ಲೇಮು ಮೊತ್ತವನ್ನು ಖಾತೆದಾರರ ನಾಮನಿರ್ದೇಶಿತರಿ(ರುಗಳಿ)ಗೆ ಪಾವತಿ ಮಾಡಲಾಗಬೇಕು. ಅಪಾಯ ಸಾಧ್ಯತೆಯ ವಿಮಾರಕ್ಷೆಯನ್ನು ವ್ಯಕ್ತಿಗೆ ವಾರ್ಷಿಕ ನವೀಕರಣದ ದಿನದಲ್ಲಿ ಇರುವಂತೆ ಅವನ/ಅವಳ 18 ವರ್ಷಗಳ ವಯಸ್ಸಿನಿಂದ (ಪೂರ್ಣಗೊಂಡಿರುವ) 55 ವರ್ಷಗಳಾಗುವ ತನಕ (ಹತ್ತಿರದ ಜನ್ಮದಿನ) ಒದಗಿಸಲಾಗುತ್ತದೆ, ಅಂದರೆ 55 ವರ್ಷಗಳ ವಯಸ್ಸಾದ ಮೇಲೆ (ಹತ್ತಿರದ ಜನ್ಮದಿನ) ಮತ್ತು ಬ್ಯಾಂಕ್‌ನೊಂದಿಗಿನ ಖಾತೆ ಮುಕ್ತಾಯಗೊಂಡಾಗ ಅಥವಾ ವಿಮೆಯನ್ನು ಜಾರಿಯಲ್ಲಿ ಇರಿಸಲು ಸಾಕಾಗುವಷ್ಟು ಮೊತ್ತ ಖಾತೆಯಲ್ಲಿ ಇಲ್ಲದಿದ್ದಾಗ ಅರ್ಹತೆಯು ಅಂತ್ಯಗೊಳ್ಳುತ್ತದೆ.

ರೂ. 2,00,000/- ದ ಮರಣ ಕ್ಲೇಮು ಇಂಡಿಯಾಫಸ್ಟ್ ಲೈಫ್ ಇನ್ಸೂರೆನ್ಸ್ ಕಂಪೆನಿಯಿಂದ ಇತ್ಯರ್ಥಗೊಳಿಸಲ್ಪಡುತ್ತದೆ. ಅನುಸರಿಸಲಾಗುವ ಪ್ರಕ್ರಿಯೆಯು ಈ ಕೆಳಗಿನಂತಿದೆ.:

**ನಾಮನಿರ್ದೇಶಿತರು ತೆಗೆದುಕೊಳ್ಳಬೇಕಾದ ಕ್ರಮಗಳು**

1. ಸದಸ್ಯರು ಯಾವ 'ಸೇವಿಂಗ್ಸ್ ಬ್ಯಾಂಕ್ ಖಾತೆ'ಯ ಮೂಲಕ ರಕ್ಷೆಗೆ ಒಳಪಟ್ಟಿದ್ದರೊ ಅವರ ಖಾತೆ ಇರುವ ಬ್ಯಾಂಕ್‌ಗೆ ಎಲ್‌ಎ ರ ಮರಣ ಪ್ರಮಾಣ ಪತ್ರದೊಂದಿಗೆ ಹೋಗಬೇಕು.
2. ನಾಮನಿರ್ದೇಶಿತರು ಬ್ಯಾಂಕ್‌ನಿಂದ ಕ್ಲೇಮು ನಮೂನೆ ಮತ್ತು ವಿಮೋಚನೆ ರಶೀದಿಯನ್ನು ಪಡೆದುಕೊಳ್ಳಬೇಕು ಅಥವಾ ಅವನು/ಅವಳು ನಮೂನೆಯನ್ನು ಇಂಡಿಯಾಫಸ್ಟ್ ಲೈಫ್ ಇನ್ಸೂರೆನ್ಸ್‌ನ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದು.
3. ನಾಮನಿರ್ದೇಶಿತರು ಕ್ಲೇಮು ನಮೂನೆ ಮತ್ತು ವಿಮೋಚನೆ ರಶೀದಿಯನ್ನು ಪೂರ್ಣಗೊಳಿಸಬೇಕು.
4. ನಾಮನಿರ್ದೇಶಿತರು ಬ್ಯಾಂಕ್‌ನ ಶಾಖೆಗೆ ಕ್ಲೇಮು ನಮೂನೆ ಮತ್ತು ವಿಮೋಚನೆ ರಶೀದಿಯನ್ನು ಮರಣ ಪ್ರಮಾಣ ಪತ್ರ ಮತ್ತು ನಾಮನಿರ್ದೇಶಿತರ ಬ್ಯಾಂಕ್ ಖಾತೆಯ ರದ್ದುಪಡಿಸಲಾದ ಚೆಕ್‌ನ ಫೋಟೋ ಪ್ರತಿಯ ಜತೆಯಲ್ಲಿ ಸಲ್ಲಿಸಬೇಕು.

**ಬ್ಯಾಂಕ್ ತೆಗೆದುಕೊಳ್ಳಬೇಕಾದ ಕ್ರಮಗಳು**

1. ಮರಣದ ಸೂಚನೆ ತಲುಪಿದ ಮೇಲೆ ಬ್ಯಾಂಕ್ ಸದಸ್ಯರ ವಿಮಾರಕ್ಷೆ ಜಾರಿಯಲ್ಲಿತ್ತೆ ಅಂದರೆ ಸದಸ್ಯರ ಮರಣದ ಮೊದಲು ವಾರ್ಷಿಕ ನವೀಕರಣದ ದಿನಾಂಕ ಅಂದರೆ 1ನೇ ಜೂನ್‌ನ ಮೊದಲು, ವಿಮಾರಕ್ಷೆಗಾಗಿ ಪ್ರಿಮಿಯಮ್ ಅನ್ನು ಮುರಿದುಕೊಳ್ಳಲಾಗಿತ್ತೆ, ಇಂಡಿಯಾಫಸ್ಟ್ ಲೈಫ್ ಇನ್ಸೂರೆನ್ಸ್ ಕಂಪೆನಿಗೆ ಕಳುಹಿಸಲಾಗಿತ್ತೆ ಎಂದು ಅವರ ದಾಖಲೆಗಳನ್ನು ಪರಿಶೀಲಿಸಬೇಕು.
2. ಬ್ಯಾಂಕ್ ಅವರೊಂದಿಗಿರುವ ದಾಖಲೆಗಳಿಂದ ಕ್ಲೇಮು ನಮೂನೆ ಮತ್ತು ನಾಮನಿರ್ದೇಶಿತರ ವಿವರಗಳನ್ನು ಪರೀಕ್ಷಿಸುತ್ತದೆ.
3. ಬ್ಯಾಂಕ್ ಮುಂದಕ್ಕೆ ಅನುಕ್ರಮವಾಗಿ ನಾಮನಿರ್ದೇಶಿತರು ಸಲ್ಲಿಸಿದ ಲಗತ್ತಿಸಲಾದ ಅನುಬಂಧಗಳಿಗೆ ಅನುಗುಣವಾಗಿ ಕ್ಲೇಮು ನಮೂನೆ ಮತ್ತು ವಿಮೋಚನೆ ರಶೀದಿಯಲ್ಲಿ ಅದರ ಭಾಗವನ್ನು ಪೂರ್ಣಗೊಳಿಸುತ್ತದೆ.
4. ಬ್ಯಾಂಕ್ ಕೆಳಗಿನ ದಾಖಲೆಗಳೊಂದಿಗೆ ಕ್ಲೇಮು ಸೂಚನೆಯನ್ನು ಮುಖ್ಯ ಕಚೇರಿ, ಇಂಡಿಯಾಫಸ್ಟ್ ಲೈಫ್ ಇನ್ಸೂರೆನ್ಸ್ ಕಂಪೆನಿಗೆ ಸಲ್ಲಿಸಬೇಕು.
   - ಎ. ಯುಕ್ತವಾಗಿ ಪೂರ್ಣಗೊಳಿಸಿದ ಕ್ಲೇಮು ನಮೂನೆ
   - ಬಿ. ಮರಣ ಪ್ರಮಾಣ ಪತ್ರ
   - ಸಿ. ನಾಮನಿರ್ದೇಶಿತರ ರದ್ದುಪಡಿಸಲಾದ ಚೆಕ್‌ನ ಫೋಟೋ ಪ್ರತಿಯೊಂದಿಗೆ ವಿಮೋಚನೆ ರಶೀದಿ

IndiaFirst
LIFE INSURANCE

A Joint Venture of
Bank of Baroda Legal & General Andhra Bank

ಇಂಡಿಯಾಫಸ್ಟ್ ಲೈಫ್ ಇನ್ಸೂರೆನ್ಸ್‌ನ ವಿಳಾಸ
ಪಿಎಮ್‌ಜೆಜೆಬಿವೈ – ಕ್ಲೇಮು ವಿಭಾಗ
ಇಂಡಿಯಾಫಸ್ಟ್ ಲೈಫ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್
301, 'ಬಿ' ವಿಂಗ್, ದಿ ಕ್ಯೂಬ್, ಇನ್‌ಫಿನಿಟಿ ಪಾರ್ಕ್,
ದಿಂಡೋಶಿ – ಫಿಲ್ಮ್ ಸಿಟಿ ರೋಡ್,
ಮಲಾಡ್ (ಪೂರ್ವ) ಮುಂಬಯಿ – 400 097

Contact Person: Mr. Shankar Patil
Phone No.: 022-3325 9743
Mail ID: claims.pmjjby@indiafirstlife.com

**ಇಂಡಿಯಾಫಸ್ಟ್ ಲೈಫ್ ಇನ್ಸೂರೆನ್ಸ್ ತೆಗೆದುಕೊಳ್ಳಬೇಕಾಗಿರುವ ಕ್ರಮಗಳು**

1. ಕ್ಲೇಮು ನಮೂನೆಯು ಎಲ್ಲಾ ರೀತಿಯಲ್ಲೂ ತುಂಬಿಸಲ್ಪಟ್ಟಿದೆ ಮತ್ತು ಕ್ಲೇಮು ಎಲ್ಲಾ ಆವಶ್ಯಕತೆಗಳೊಂದಿಗೆ ಸಲ್ಲಿಸಲಾಗಿದೆ ಎಂದು ಪರೀಕ್ಷಿಸಿರಿ. ಇಲ್ಲದಿದ್ದರೆ ಈ ಕುರಿತು ಸಂಬಂಧಪಟ್ಟ ಬ್ಯಾಂಕ್‌ನೊಂದಿಗೆ ವ್ಯವಹರಿಸಿರಿ.
2. ಕ್ಲೇಮು ಅಂಗೀಕಾರಾರ್ಹವಾಗಿದ್ದರೆ ಕ್ಲೇಮುಗಳ ತಂಡವು ಸದಸ್ಯರ ವಿಮಾರಕ್ಷೆಯು ಜಾರಿಯಲ್ಲಿದೆಯೆ ಮತ್ತು ಇತರ ಯಾವುದೇ ಖಾತೆಯ ಮೂಲಕ ಸದಸ್ಯರಿಗಾಗಿ ಮರಣ ಕ್ಲೇಮು ಇತ್ಯರ್ಥ ಪಡಿಸಲಾಗಿಲ್ಲ ಎನ್ನುವುದನ್ನು ಪರೀಕ್ಷಿಸುತ್ತದೆ.
3. ಮೇಲಿನ ಪ್ರಕ್ರಿಯೆಯು ಇತರ ಯಾವುದೇ ಖಾತೆಯ ಮೂಲಕ ಪಿಎಮ್‌ಜೆಜೆಬಿವೈ ಯ ಅಡಿಯಲ್ಲಿ ನಕಲು ಕ್ಲೇಮು ಇಲ್ಲದಿರುವುದನ್ನು ಖಾತ್ರಿಪಡಿಸುತ್ತದೆ. ಯಾವುದೇ ಕ್ಲೇಮು ಇತ್ಯರ್ಥ ಪಡಿಸಲಾಗಿರುವ ಪ್ರಸಂಗದಲ್ಲಿ ಆಗ ಆದಕ್ಕನುಸಾರವಾಗಿ ನಾಮನಿರ್ದೇಶಿತರಿಗೆ ಬ್ಯಾಂಕಿಗೆ ಒಂದು ಪ್ರತಿಯನ್ನು ಗುರುತಿಸುವುದೊಂದಿಗೆ ಸೂಚನೆ ನೀಡಲಾಗುತ್ತದೆ.
4. ವಿಮಾರಕ್ಷೆ ಜಾರಿಯಲ್ಲಿದ್ದರೆ ಮತ್ತು ಸದರಿ ಸದಸ್ಯರಿಗಾಗಿ ಯಾವುದೇ ಕ್ಲೇಮನ್ನು ಇತ್ಯರ್ಥ ಪಡಿಸಲಾಗಿರದಿದ್ದರೆ, ನಾಮನಿರ್ದೇಶಿತರ ಖಾತೆಗೆ ಪಾವತಿಯನ್ನು ಬಿಡುಗಡೆ ಮಾಡಲಾಗುತ್ತದೆ ಮತ್ತು ನಾಮನಿರ್ದೇಶಿತರಿಗೆ ಒಂದು ಸೂಚನೆಯನ್ನು ಬ್ಯಾಂಕಿಗೆ ಒಂದು ಪ್ರತಿಯನ್ನು ಗುರುತುಪಡಿಸುವುದರೊಂದಿಗೆ ಕಳುಹಿಸಲಾಗುತ್ತದೆ.
5. ಕ್ಲೇಮು ಪಾವತಿಗಳನ್ನು ನ್ಯಾಶನಲ್ ಇಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ (ಎನ್‌ಇಎಫ್‌ಟಿ) ನ ಮೂಲಕ ಮಾತ್ರ ಮಾಡಲಾಗುತ್ತದೆ.

ಕ್ಲೇಮುದಾರರಿಂದ ಕ್ಲೇಮು ನಮೂನೆಯು ನೇರವಾಗಿ ಇಂಡಿಯಾಫಸ್ಟ್ ಲೈಫ್ ಇನ್ಸೂರೆನ್ಸ್ ಕಂಪೆನಿಗೆ ಸಲ್ಲಿಸಲ್ಪಟ್ಟ ಪ್ರಸಂಗದಲ್ಲಿ ಆಗ ಇಂಡಿಯಾಫಸ್ಟ್ ಲೈಫ್ ಇನ್ಸೂರೆನ್ಸ್ ಕಂಪೆನಿಯು ಅದನ್ನು ಮೃತ ಖಾತೆದಾರರ ಬ್ಯಾಂಕಿಗೆ ತಕ್ಷಣ ಆವಶ್ಯಕವಿರುವ ಪರೀಕ್ಷೆ ಇತ್ಯಾದಿಗಳು ಸಂಬಂಧಪಟ್ಟ ಬ್ಯಾಂಕಿನಿಂದ ಮಾಡಲ್ಪಡುವ ಸಲುವಾಗಿ ಕಳುಹಿಸುತ್ತದೆ. ಸಂಬಂಧಪಟ್ಟ ಬ್ಯಾಂಕ್ ಶಾಖೆಯು ಕ್ಲೇಮು ನಮೂನೆಯನ್ನು ಕ್ಲೇಮನ್ನು ಪ್ರಕ್ರಿಯೆಗೊಳಿಸುವುದಕ್ಕಾಗಿ ಇಂಡಿಯಾಫಸ್ಟ್ ಲೈಫ್ ಇನ್ಸೂರೆನ್ಸ್ ಕಂಪೆನಿಗೆ ಕಳುಹಿಸುತ್ತದೆ.